

ಹೋದರು. ವಾರದಲ್ಲಿ ಆ ಮಗು ಕೊನೆಯುಸಿರೆಳೆಯಿತು, ನಾವೇ ಅಂತ್ಯಕ್ರಿಯೆ ನಡೆಸಿದೆವು'' ಎನ್ನುವಾಗ ಅವರ ಗಂಟಲು ಉಬ್ಬಿ ಬಂತು.

## ಎಲ್ಲವೂ ಇಂತಹುದೇ ದುರಂತ ಕತೆಗಳು

''ಅದು 2010ನೇ ಇಸವಿ, ಎಚ್‌ಐವಿ ಪೀಡಿತ ಮಕ್ಕಳ ಆರೈಕೆ ಕೇಂದ್ರ ತೆರೆದ ಶುರುವಿನ ದಿನಗಳು ಅವು. ನನ್ನ ಸ್ವಂತ ಮಗಳ ಪ್ರಾಯದ ಮಗು, ನನ್ನ ಮಗಳದೇ ಮೈಕಟ್ಟು. ಆಕೆಗೆ ಆಗ ನಾಲ್ಕು ವರ್ಷ. ಅಪ್ಪ–ಅಮ್ಮನನ್ನು ಕಳೆದುಕೊಂಡಿದ್ದ ಮಗುವನ್ನು ಅಜ್ಜ ಬಂದು ನಮ್ಮ ಕೇಂದ್ರಕ್ಕೆ ಬಿಟ್ಟು ಹೋಗಿದ್ದರು. ಆಗಲೇ ಆಕೆ ಬದುಕಿನ ಕೊನೆಯ ಘಟ್ಟದಲ್ಲಿದ್ದಳು. 'ಅಮ್ಮ ಅಮ್ಮ' ಅನ್ನುತ್ತ ನನ್ನ ಹಿಂದೇ ಸುತ್ತುವವಳು. ರೋಗ ಉಲ್ಬಣಗೊಂಡು ಆಕೆ ಮೃತಪಟ್ಟಾಗ ದಿಕ್ಕು ತೋಚದಂತಾಯಿತು. ಆಂಬುಲೆನ್ಸ್‌ಗೆ ಕೊಡುವಷ್ಟು ಹಣ ಕೂಡ ನನ್ನಲ್ಲಿ ಇರಲಿಲ್ಲ. ಬಿಳಿ ಬಟ್ಟೆಯಲ್ಲಿ ಮಗುವನ್ನು ಎತ್ತಿ, ನನ್ನ ದೇಹಕ್ಕಾನಿಸಿಕೊಂಡು ರಿಕ್ಷಾದಲ್ಲಿ ಕುಳಿತೆ. ನಂದಿಗುಡ್ಡ ಸ್ಮಶಾನಕ್ಕೆ ತೆರಳಿ ಅಲ್ಲಿ ಅಂತ್ಯಕ್ರಿಯೆ ಮಾಡಿಬಂದೆ. ತಿಂಗಳು ಕಳೆದರೂ, ಆ ಮಗುವಿನ ದನಿ ಮನೆತುಂಬ ಗುನುಗಿದ ಭ್ರಮೆಯಾಗುತ್ತಿತ್ತು'' ಎಂದು ತಬಸ್ಸುಮ್, ಮೊದಲ ಅನುಭವ ಸ್ಮರಿಸಿಕೊಂಡರು.

## 'ಸ್ನೇಹದೀಪ'ದ ಅಮ್ಮ

ಮಂಗಳೂರಿನ ಬಿಜೈ ಕಾಪಿಕಾಡ್‌ನಲ್ಲಿ 'ಸ್ನೇಹದೀಪ' ಹೆಸರಿನ ಎಚ್‌ಐವಿ ಪೀಡಿತ ಹೆಣ್ಣುಮಕ್ಕಳ ಆರೈಕೆ ಕೇಂದ್ರವಿದೆ. ಇಲ್ಲಿ ಈಗ ಸುಮಾರು 27 ಮಕ್ಕಳಿದ್ದಾರೆ. ಅವರಲ್ಲಿ ನಾಲ್ಕೈದು ಮಕ್ಕಳು ಬದುಕಿನ ಅಂತಿಮ ದಿನಗಳ ಎಣಿಕೆಯಲ್ಲಿದ್ದಾರೆ. ಈ ಎಲ್ಲ ಮಕ್ಕಳಿಗೆ 'ಅಮ್ಮ'ನ ಅಕ್ಕರೆ ನೀಡುತ್ತಿರುವವರು ತಬಸ್ಸುಮ್.

ಸ್ನೇಹಿತೆಯೊಬ್ಬರು ಎಚ್‌ಐವಿಯಿಂದ ತೀರಿಕೊಂಡಾಗ, ಅವರ ಮಗು ಅನಾಥವಾಗಿದ್ದನ್ನು ಕಂಡು ಮರುಗಿದ ತಬಸ್ಸುಮ್ ಇಂತಹ ಮಕ್ಕಳಿಗೆ ಆಸರೆಯಾಗಬೇಕೆಂದು ನಿರ್ಧರಿಸಿ, ತಮ್ಮ 26ನೇ ವಯಸ್ಸಿನಲ್ಲಿ 'ಸ್ನೇಹದೀಪ' ಆರಂಭಿಸಿದರು. ಮನದ ತುಂಬ ಕರುಣೆ ಇದ್ದರೂ ಅವರ ಬಳಿ ಕಾಸು ಇರಲಿಲ್ಲ. ತಂದೆ ನೀಡಿದ ನೆರವಿನಲ್ಲಿ ಕೇಂದ್ರ ತೆರೆದು, ಗರಿಷ್ಠ 10 ಹೆಣ್ಣು ಮಕ್ಕಳಿಗೆ ಅವಕಾಶ ನೀಡಬೇಕೆಂದುಕೊಂಡರು. ಆದರೆ, ಮಕ್ಕಳಿಗಾಗಿ ಮಿಡಿಯುವ ಅವರ ಮನಸ್ಸು 'ಮಿತಿ'ಗೆ ಒಪ್ಪಿಕೊಳ್ಳಲಿಲ್ಲ. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಮಕ್ಕಳು ಬರಲಾರಂಭಿಸಿದರು. 13 ವರ್ಷಗಳಲ್ಲಿ 80ಕ್ಕೂ ಹೆಚ್ಚು ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದಾರೆ. ಅವರಲ್ಲಿ 19 ಮಕ್ಕಳು ಅಸುನೀಗಿದ್ದಾರೆ. ಮೂವರು ಯುವತಿಯರು ಮದುವೆಯಾಗಿ ಸಂಸಾರ ನಡೆಸುತ್ತಿದ್ದಾರೆ (ಎಚ್‌ಐವಿ ಪೀಡಿತರನ್ನೇ ಮದುವೆಯಾಗಿದ್ದಾರೆ), 18 ವರ್ಷ ದಾಟಿದವರು ಕೆಲವರು ಉದ್ಯೋಗಕ್ಕೆ ಸೇರಿದ್ದಾರೆ.

ಈಗ ಇರುವ ಹೆಣ್ಣುಮಕ್ಕಳಲ್ಲಿ ಶಾಲೆ–ಕಾಲೇಜಿಗೆ ಹೋಗುವವರು, ಕಂಪ್ಯೂಟರ್ ತರಬೇತಿ ಪಡೆಯುತ್ತಿರುವವರು, ಟೈಲರಿಂಗ್ ಕಲಿಯುತ್ತಿರುವವರು ಇದ್ದಾರೆ. ಲವಲವಿಕೆಯಿಂದ ಮನೆ ತುಂಬ ಓಡಾಡಿಕೊಂಡಿರುವ ಮಕ್ಕಳು ತಬಸ್ಸುಮ್ ಬಂದಾಕ್ಷಣ 'ಅಮ್ಮ' ಎನ್ನುತ್ತ ಮುತ್ತಿಕೊಳ್ಳುತ್ತಾರೆ. ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ತಬಸ್ಸುಮ್ ಅವರಿಗೆ ಸಾಥಿಯಾಗಿ ಮೂವರು ಕೇರ್ ಟೇಕರ್ಸ್ ಇದ್ದಾರೆ. ಮಕ್ಕಳಿಗೆ ದಿಢೀರ್ ಅಸೌಖ್ಯವಾದರೆ ಇವರು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸುತ್ತಾರೆ, ಮಕ್ಕಳಿಗೆ ರುಚಿಯಾದ ಊಟ ಮಾಡಿ ಬಡಿಸುತ್ತಾರೆ.

ಕೇಂದ್ರದಲ್ಲಿರುವ ಮಕ್ಕಳಲ್ಲಿ ಹೆಚ್ಚಿನವರು ಪಾಲಕರನ್ನು ಕಳೆದುಕೊಂಡವರು. ಅವರಿಗೆ ಕುಟುಂಬದ ಆಸರೆ ಇಲ್ಲ. ಅಜ್ಜ–ಅಜ್ಜಿ, ದೊಡ್ಡಪ್ಪ–ದೊಡ್ಡಮ್ಮ, ಅಕ್ಕ–ಅಣ್ಣಂದಿರು ಇದ್ದರೂ ಅವರು, ಮಗುವನ್ನು ಬಿಟ್ಟು ಹೋದ ಮೇಲೆ ಇತ್ತ ತಲೆಹಾಕುವುದಿಲ್ಲ. ಅನಾಥ ಮಕ್ಕಳಿಗೆ ಔಷಧದ ಜೊತೆಗೆ ಸಾಂತ್ವನ, ಕೌನ್ಸೆಲಿಂಗ್ ಕೂಡ ಬೇಕಾಗುತ್ತದೆ. ಇದನ್ನೂ ತಬಸ್ಸುಮ್ ಅವರೇ ನಿಭಾಯಿಸುತ್ತಾರೆ.

'ಮಕ್ಕಳಿಗೆ ಪ್ರತಿನಿತ್ಯ ಹೆಚ್ಚಿನ ಔಷಧ ಇರುವುದರಿಂದ ಪೌಷ್ಟಿಕ